**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಸಿಸಿ ನಂಬರಃ 791/2024**

ಸಿ ಡಬ್ಲ್ಯೂ 1

ಪಿ ಡಬ್ಲ್ಯೂ 3

**ಸಾಕ್ಷಿದಾರರ ಹೆಸರು** : ಗಡ್ಡೆಪ್ಪ ಎಂ ಗುಂಜಟಗಿ

**ತಂದೆಯ ಹೆಸರು** : ಮಲ್ಲಪ್ಪ

**ವಯಸ್ಸು** : 32 ವರ್ಷ

**ಉದ್ಯೋಗ** : ಪಿ ಎಸ್ ಐ ಹೆಸ್ಕಾಂ ವಿಜಲೆನ್ಸ ಹಾವೇರಿ.

**ವಾಸ** : ಹಾವೇರಿ.

**ದಿನಾಂಕಃ 22-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರು ಅವರಿಂದಃ**

1. ನಾನು 15-06-2023 ರಿಂದ 22-01-2026 ರವರೆಗೆ ರಾಣೇಬೆನ್ನೂರು ನಗರ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 20-03-2024 ರಂದು ನಾನು ಠಾಣೆಯಲ್ಲಿದ್ದಾಗ ಸಂಜೆ 5.30 ಗಂಟೆಗೆ ರಾಣೇಬೆನ್ನೂರು ನಗರದ ಶಂಕರ ಟಾಕೀಸ್ ಬದಿಯಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿರುತ್ತದೆ. ಈ ವಿಷಯವನ್ನು ನಮ್ಮ ಮೇಲಾಧಿಕಾರಿಯವರಿಗೆ ತಿಳಿಸಿ ನಮ್ಮ ಠಾಣಾ ಸಿಬ್ಬಂದಿಯವರಾದ ಚಾಸಾ-4 ರಿಂದ 6 ರವರನ್ನು ಠಾಣೆಗೆ ಕರೆಯಿಸಿ ಬಾತ್ಮಿಯ ಬಗ್ಗೆ ತಿಳಿಸಿ, ಚಾಸಾ-6 ರವರ ಮೂಲಕ ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ ಅವರಿಗೂ ಸಹ ಬಾತ್ಮಿ ಬಂದ ವಿಚಾರವನ್ನು ತಿಳಿಸಿ ದಾಳಿಯ ಕಾಲಕ್ಕೆ ಪಂಚರಾಗಿ ಸಹಕರಿಸುವಂತೆ ತಿಳಿಸಿ, ಸಂಜೆ 6 ಗಂಟೆಗೆ ಸರ್ಕಾರಿ ಜೀಪ್ ಮತ್ತು ಮೋಟಾರ್ ಸೈಕಲ್ ಗಳಲ್ಲಿ ಸಿಬ್ಬಂದಿಗಳನ್ನು ಮತ್ತು ಪಂಚರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಹೋಗಿ ಮರೆಯಲ್ಲಿ ನಿಂತು ನೋಡಿ ಅಲ್ಲಿ ಒಬ್ಬ ವ್ಯಕ್ತಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದುದ್ದನ್ನು ಖಚಿತ ಪಡಿಸಿಕೊಂಡು ಸಂಜೆ 6.30 ರ ಸುಮಾರಿಗೆ ದಾಳಿ ಮಾಡಿದ್ದು ಆಗ ಆರೋಪಿ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಆತನನ್ನು ಸುತ್ತುವರೆದು ಹಿಡಿದು ವಿಚಾರಿಸಿದಾಗ ಆತನ ಹೆಸರು ಜೀವರಾಜ ಭೀಮಪ್ಪ ನಾಯಕ ಎಂದು ಹೇಳಿದ್ದು , ಪ್ಲಾಸ್ಟಿಕ ಚೀಲದಲ್ಲಿ ಏನು ಇದೆ ಎಂದು ವಿಚಾರಿಸಲಾಗಿ ಅದರಲ್ಲಿ ವಿಸ್ಕಿ ಪೌಚುಗಳು ಇದ್ದು, ಆ ಬಗ್ಗೆ ಲೈಸೆನ್ಸ ವಗೈರೆ ಏನು ಇಲ್ಲ ಎಂದು ಹೇಳಿರುತ್ತಾರೆ. ನಂತರ ಪಂಚರ ಸಮಕ್ಷಮ

ಚೀಲವನ್ನು ಪರೀಶಿಲಿಸಲಾಗಿ ಅದರಲ್ಲಿ 90 ಎಂ ಎಲ್ ನ ಹೈ ವರ್ಡ್ಸ ಚೆಯರ್ಸ ವಿಸ್ಕಿಯ 48 ಪೌಚುಗಳು ಇದ್ದವು ಅವುಗಳನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡು ನಿಪಿ-1 ರಂತೆ ಪಂಚನಾಮೆಯನ್ನು 6.30 ಗಂಟೆಯಿಂದ 7.30 ಗಂಟೆಯವರೆಗೆ ಪಂಚನಾಮೆ ಕ್ರಮ ಜರುಗಿಸಿ ಜಪ್ತು ಪಡಿಸಿಕೊಂಡ ಮುದ್ದೆ ಮಾಲು ಆರೋಪಿಯೊಂದಿಗೆ ಠಾಣೆಗೆ ಹಾಜರಾಗಿ ಈ ಬಗ್ಗೆ ಸರ್ಕಾರಿ ತರ್ಫೆ ನೀಡಿರುತ್ತೇನೆ. ನಿಪಿ-1 ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಆ ದಿನ ನಾವು ದಾಳಿ ಮಾಡಿ ದಸ್ತಗಿರಿ ಮಾಡಿದ ಆರೋಪಿ ಹಾಗೂ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಎಸ್ ಎಲ್ ವಕೀಲರಿಂದಃ**

1. ಸಂಜೆ 5.30 ರ ಸುಮಾರಿಗೆ ಬಾತ್ಮಿ ಬಂದಿರುತ್ತದೆ. 6 ಗಂಟೆಗೆ ನಾವು ಠಾಣೆಯನ್ನು ಬಿಟ್ಟಿರುತ್ತೇವೆ. ನಾವು ದಾಳಿ ಮಾಡುವ ಕಾಲಕ್ಕೆ 6.30 ಗಂಟೆಯಾಗಿದ್ದು, ಶಂಕರ ಟಾಕೀಸ್ ಹತ್ತಿರ ರಸ್ತೆ ಬದಿಯ ಕಂಪೌಂಡ್ ಹತ್ತಿರ ನಿಂತು ನೋಡಿರುತ್ತೇವೆ. ಠಾಣೆಯಿಂದ ಶಂಕರ್ ಟಾಕೀಸ ಗೆ ಹೋಗಲು 5 ರಿಂದ 10 ನಿಮಿಷ ಸಾಕು. ಶಂಕರ ಟಾಕೀಸ ಹತ್ತಿರ ಸಾಕಷ್ಟು ಜನರು ಓಡಾಡುತ್ತಾರೆ ಎಂದರೆ ಸರಿ. ಶಂಕರ ಟಾಕೀಸ್ ಜನನಿಬೀಡವಾದ ಸ್ಥಳ ಎಂದರೆ ಸರಿ. ಶಂಕರ ಟಾಕೀಸ್ ಪಕ್ಕದಲ್ಲಿ ನೆಹರು ಮಾರ್ಕೆಟ್ ಗೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಶಂಕರ ಟಾಕೀಸ್ ಗೆ ತಾಗಿ ಪಿ ಬಿ ರಸ್ತೆ ಇರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಶಂಕರ ಟಾಕೀಸ್ ಹತ್ತಿರ ನೆ ಮದ್ಯ ಮಾರಾಟದ ಅಂಗಡಿಗಳು ಇವೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಶಂಕರ ಟಾಕೀಸ್ ಹತ್ತಿರ ಮಾರುಕಟ್ಟೆಗೆ ಹೋಗುವವರು ಚೀಲ ಹಿಡಿದುಕೊಂಡು ಹೋಗುತ್ತಾರೆ ಎಂದರೆ ಸರಿ. ಅಂತಹ ಸ್ಥಳದಲ್ಲಿ ಸಮಾನ್ಯವಾಗಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ. ಶಂಕರ ಟಾಕೀಸ ಹತ್ತಿರ ನಿಂತು ನೋಡಿದಾಗ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಅಲ್ಲಿ ಜನನಿಬಿಡವಾದ ಸ್ಥಳ ಆಗಿರುವುದರಿಂದ ಅಲ್ಲಿ ಯಾವುದೆ ವ್ಯಕ್ತಿ ಅಕ್ರಮ ಮದ್ಯ ಮಾರಾಟ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಎಷ್ಟು ಮದ್ಯ ಮಾರಾಟ ಮಾಡಿದ್ದ ಎಂದು ನನಗೆ ಮಾಹಿತಿ ಇರುವುದಿಲ್ಲ. ಎಷ್ಟು ಪೌಚುಗಳನ್ನು ಆರೋಪಿ ಮಾರಾಟ ಮಾಡಿದ್ದ ಎಂದು ನನಗೆ

ಗೊತ್ತಿರುವುದಿಲ್ಲ.

2. ಪಂಚರನ್ನು ಚಾಸಾ-6 ರವರ ಮೂಲಕ ಕರೆಯಿಸಿದ್ದೆನು, ಅವರು ಎಲ್ಲಿಯವರು ಎಂದು ನನಗೆ ಗೊತ್ತಿರುವುದಿಲ್ಲ. ಪಂಚರು ಯಾವ ಊರಿನಿಂದ ಬಂದಿರುತ್ತಾರೆ ಎಂದು ನಾನು ಮಾಹಿತಿ ತಿಳಿದುಕೊಂಡಿರುತ್ತೇನೆ. ಅವರ ಹೆಸರು ಗುರುಲಮಾಣಿ ಮತ್ತು ಪೀಕಪ್ಪ ಲಮಾಣಿ ಆಗಿರುತ್ತದೆ. ಘಟನಾ ಸ್ಥಳದಲ್ಲಿ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಯಾವುದೆ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳು ಸಾಮಾನ್ಯವಾಗಿ ಎಲ್ಲಾ ಅಂಗಡಿಯಲ್ಲೂ ಸಿಗುತ್ತವೆ ಎಂದರೆ ಸರಿ. ಆರೋಪಿಗೂ ಈ ಘಟನೆಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿ ಮೇಲಾಧಿಕಾರಿಯವರ ಮಾತು ಕೇಳಿ ಅಂಕಿ ಸಂಖ್ಯೆಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.